

ಕಲೋಸಿಯಂ ಪಕ್ಕದಲ್ಲಿರುವ ಅವಶೇಷಗಳು

ಹರಡಿಕೊಂಡಿದ್ದಾರೆ. ಇದು ಹದಗೆಟ್ಟಿರುವ ಇಟಲಿಯ ಆರ್ಥಿಕತೆಯ ಪರಿಣಾಮವೋ ಯಾತ್ರಾಸ್ಥಳಗಳ ಸಹಜ ಲಕ್ಷಣವೋ ಇದ್ದೀತು. ಕುಸಿಯುತ್ತಿರುವ ಸ್ಮಾರಕಗಳನ್ನು ಮರಾಮತ್ತು ಮಾಡಿ ಉಳಿಸಿಕೊಳ್ಳಲು ಸರ್ಕಾರ ಸೆಣಸುತ್ತಿದೆ. ಇದು ಛಿದ್ರಗೊಂಡಿರುವ ತನ್ನ ಆರ್ಥಿಕತೆಯ ದಿರಿಸಿಗೆ, ಪ್ರಾಚೀನ ಸ್ಮಾರಕಗಳ ಹೆಮ್ಮೆಯ ಚೂರುಗಳಿಂದ ತೇಪೆಹಾಕುತ್ತಿರುವಂತೆ ತೋರುತ್ತಿದೆ.

ಆದರೆ ಪ್ರಾಚೀನ ರೋಮಿನ ಭೋಗಸಂಸ್ಕೃತಿಯು ಇಟಲಿಯ ತರುಣ ತರುಣಿಯರಲ್ಲಿ ಬೇರೊಂದು ರೂಪದಲ್ಲಿ ಮುಂದುವರೆದಿದೆ ಅನಿಸಿತು. ನಮ್ಮ ವಸತಿಯಿದ್ದ 'ರೋಂ ವಿಶ್ವವಿದ್ಯಾಲಯ' ಕ್ಯಾಂಪಸ್ಸಿನ ಪಕ್ಕದ ಬೀದಿಹೋಟೆಲುಗಳಲ್ಲಿ, ರೋಮಿನ ಶಿಲ್ಪ ಹಾಗೂ ವರ್ಣಚಿತ್ರಗಳಲ್ಲಿರುವ ಜನರೇ ಜೀವಪಡೆದು ಬೀದಿಗೆ ಬಂದಂತೆ, ಇಟಲಿಯ ತರುಣ–ತರುಣಿಯರು ಹರಟುತ್ತ ಕುಡಿಯುತ್ತ ತಿನ್ನುತ್ತ ನಡುರಾತ್ರಿ ತನಕ ಕಲರವ ಎಬ್ಬಿಸಿದ್ದರು. ಕ್ಯಾಂಪಸ್ಸಿನ ಕ್ಯಾಂಟೀನಿನ ತುಂಬ ವೈನಿನ ಬಾಟಲಿಗಳನ್ನು ಜೋಡಿಸಲಾಗಿದ್ದು, ಜನ ಕಾಫಿ–ಟೀಯಂತೆ ಅದನ್ನು ಕುಡಿಯುತ್ತಿದ್ದರು. ಈ ಮೋಜು–ವಿಲಾಸ ವೆನಿಸಿನಲ್ಲಿ ಮತ್ತೂ ದಟ್ಟವಾಗಿವೆ. ದೋಣಿಗಳಲ್ಲಿ ಫ್ರೆಶ್ ಆದ ವೈನನ್ನು ಹೊತ್ತು ದೊಡ್ಡದೊಡ್ಡ ಪೀಪಾಯಿಗಳು ಹೋಟೆಲುಗಳಿಗೆ ವಿತರಿಸುವುದನ್ನು ಅಲ್ಲಿ ಕಾಣಬಹುದು.

ರೋಮಿನಲ್ಲಿ ನನಗೆ ಗಾಢವಾಗಿ ಕಾಡಿದ್ದು ವ್ಯಾಟಿಕನ್ ಅರಮನೆಯಲ್ಲಿದ್ದ ಮೈಕೇಲ್ ಏಂಜೆಲೊ ಚಿತ್ರಗಳಿರುವ ಖೋಲಿ. ಏಸುವಿನ ಬದುಕಿನ ವಿವಿಧ ಘಟ್ಟಗಳನ್ನು ಮಾಳಿಗೆಯ ಮೇಲೆ ಅಂಗಾತ ಮಲಗಿ ಬಿಡಿಸಿದ ಕಲಾವಿದನ ಕಲಾಶ್ರದ್ಧೆಯು ಧರ್ಮಶ್ರದ್ಧೆಗಿಂತ ಮಿಗಿಲಾಗಿದೆ. ಮೈಯನ್ನು ಜುಮ್ಮುಗಟ್ಟಿಸುವ ಈ ಚಿತ್ರಗಳನ್ನು ನೋಡುತ್ತ ಕೆ.ವಿ. ಅಯ್ಯರವರ 'ರೂಪದರ್ಶಿ' ಕಾದಂಬರಿ ನೆನಪಾಯಿತು. ಕಲಾವಿದನು ಬಾಲ ಏಸುವನ್ನು ಚಿತ್ರಿಸಲು ಮುಗ್ಧಮೊಗದ ಹುಡುಗನನ್ನು ರೂಪದರ್ಶಿಯಾಗಿ ಮುಂದೆ ಕೂರಿಸಿಕೊಂಡು ಚಿತ್ರಬಿಡಿಸುವ ದೃಶ್ಯದಿಂದ ಕಾದಂಬರಿ ಆರಂಭವಾಗುತ್ತದೆ. ಚಿತ್ರಸರಣಿಯನ್ನು ಮುಗಿಸಲು ಕಲಾವಿದನಿಗೆ ಅದೆಷ್ಟೊ ವರ್ಷ ಬೇಕಾಗುತ್ತವೆ. ಕೊನೆಯಲ್ಲಿ ಏಸುವನ್ನು ಕೊಲೆಗಾರರಿಗೆ ಹಿಡಿದುಕೊಡುವ ಸಂಚುಕೋರ ಶಿಷ್ಯ ಜುದಾಸನನ್ನು ಚಿತ್ರಿಸಬೇಕು. ಆಗ ಕಲಾವಿದನು ಕುಟಿಲ ವ್ಯಕ್ತಿತ್ವವುಳ್ಳ ವ್ಯಕ್ತಿ ಹೀಗಿರಬಹುದೆಂದು ಊಹಿಸಿ ಒಬ್ಬ ಭೀಷಣ ಮುಖದವನನ್ನು ಪತ್ತೆಮಾಡಿ ತಂದು, ರೂಪದರ್ಶಿಯನ್ನಾಗಿ ಅಟ್ಟಣಿಗೆಯ ಮೇಲೆ ಕೂರಿಸಿಕೊಳ್ಳುತ್ತಾನೆ. ಸದರಿ 'ರೂಪದರ್ಶಿ'ಯು ಒಮ್ಮೆ ಕತ್ತು ಹೊರಳಿಸಿ ಮಾಳಿಗೆಯಲ್ಲಿ ಬಿಡಿಸಲಾಗಿದ್ದ ಚಿತ್ರಗಳನ್ನೆಲ್ಲ ನೋಡುತ್ತ ಬಾಲಏಸುವಿನ ಚಿತ್ರಕ್ಕೆ ಬರುತ್ತಾನೆ. ಅದನ್ನು ನೋಡುತ್ತಿದ್ದಂತೆ, ಏನೋ ಸ್ಮರಣೆಗೆ ಬಂದು ದೊಪ್ಪನೆ ಅಟ್ಟಣಿಗೆಯಿಂದ ಬಿದ್ದು ಸತ್ತುಬಿಡುತ್ತಾನೆ. ಕಾರಣ, ಬಾಲ ಏಸುವಿಗೂ ರೂಪದರ್ಶಿಯಾಗಿದ್ದವನು ಅವನೇ ಆಗಿರುತ್ತಾನೆ. ಇದೊಂದು ವ್ಯಕ್ತಿಯ ಬದುಕಲ್ಲಿ ಸಂಭವಿಸುವ ಭೀಕರವಾದ ತಿರುಗಣೆ ಅಥವಾ ಪತನ. ಗತಕಾಲದ ವೈಭವವನ್ನು ಕಳೆದುಕೊಂಡ ರೋಮನ್ ಸಾಮ್ರಾಜ್ಯವು, ಇಂತಹುದೇ ನಾಟಕೀಯತೆಯಲ್ಲಿ ಬಡ ಇಟಲಿಯಾಗಿ ಬದಲಾಗಿದೆಯೇ ಎಂದು ಶಂಕೆ ಬಂದಿತು. ಮೊದಲಿಗೆ ಅದರ ಬಗ್ಗೆ ಹುಟ್ಟಿದ್ದ ವಿಸ್ಮಯ–ವಿಷಾದಗಳ ಜತೆ ಈಗ ಮರುಕ ಸೇರಿಕೊಂಡಿತು.

ಚರಿತ್ರೆಯ ಭಾರದಲ್ಲಿ ವರ್ತಮಾನವು ತರಹರಿಸಿ ಬದುಕುವ ಬವಣೆಗಳನ್ನು ನೋಡುವುದಕ್ಕಾದರೂ ರೋಮಿನ ದಾರಿಯಲ್ಲಿ ಒಂದು ಸಲ ಎಲ್ಲರೂ ಹೋಗಿಬರಬೇಕು.

ಪ್ರತಿಕ್ರಿಯಿಸಿ: **feedback@sudha.co.in**

